# ಸೈಬರ್ ಖದೀಮರ ವಿರುದ್ಧ 'ಚಕ್ಷು'

■ **ಶಶಿಕುಮಾರ್ ಸಿ.**

ಡಿಜಿಟಲ್ ಬಳಕೆ ಹೆಚ್ಚಾದಂತೆಲ್ಲ ಸೈಬರ್ ಅಪರಾಧಗಳೂ ಹೆಚ್ಚಾಗುತ್ತಿವೆ. ಜನರಲ್ಲಿ ಎಷ್ಟೇ ಜಾಗೃತಿ ಮೂಡಿಸಿದರೂ ಅಪರಾಧ ಕೃತ್ಯಗಳು ಹತೋಟಿಗೆ ಬರುತ್ತಲೇ ಇಲ್ಲ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ, ಹದ್ದಿನ ಕಣ್ಣಿಡಲು ಕೇಂದ್ರ ಸರ್ಕಾರವು ಈಚೆಗೆ 'ಚಕ್ಷು' ಪೋರ್ಟಲ್ ಆರಂಭಿಸಿದೆ. ಸೈಬರ್ ಅಪರಾಧ ಎಸಗುವ ಉದ್ದೇಶದಿಂದ ಕೂಡಿದ ಅನುಮಾನಾಸ್ಪದ ಸಂವಹನ ನಡೆಸುವ ಜಾಲಗಳಿಗೆ ಕಡಿವಾಣ ಹಾಕುವ ಕಾರ್ಯವನ್ನು ಈ ಪೋರ್ಟಲ್ ಮಾಡಲಿದೆ.

ಕೇಂದ್ರ ಸರ್ಕಾರದ 'ಸಂಚಾರ ಸಾಥಿ' ಯೋಜನೆಯ ಭಾಗವಾಗಿ ಪರಿಚಯಿಸಲಾದ 'ಚಕ್ಷು' ಪೋರ್ಟಲ್‌ನಲ್ಲಿ, ದೂರಸಂಪರ್ಕ ಸೇವಾ ಬಳಕೆದಾರರನ್ನು ವಂಚಿಸುವ ಉದ್ದೇಶದಿಂದ ಕೂಡಿರುವ ಎಲ್ಲ ಬಗೆಯ ಸಂವಹನಗಳನ್ನು ವರದಿ ಮಾಡಲು 'ಚಕ್ಷು' ಅವಕಾಶ ಕಲ್ಪಿಸಲಿದೆ. ಕರೆ, ಪತ್ರದ ಮೂಲಕ, ಇ–ಮೇಲ್ ಮೂಲಕವೂ ವರದಿ ಮಾಡಬಹುದು.

ಗ್ರಾಹಕರ ಸಿಮ್ ಕಾರ್ಡ್ ಕುರಿತ ಮಾಹಿತಿ, ಬ್ಯಾಂಕ್ ಖಾತೆಗಳು ಮತ್ತು ಪಾವತಿ ವಾಲೆಟ್‌ಗಳ ಮಾಹಿತಿ ಸೋರಿಕೆ ಸಂಬಂಧಿಸಿದಂತೆ ದೂರುಗಳನ್ನು ಇದರಲ್ಲಿ ಸಲ್ಲಿಸಬಹುದು. ಫೋನ್ ಕರೆ, ಎಸ್‌ಎಂಎಸ್, ವಾಟ್ಸ್‌ಆ್ಯಪ್ ಮೂಲಕ ನಡೆಯುವ ವಂಚನೆಯ ಬಗ್ಗೆಯೂ ವರದಿ ಮಾಡಬಹುದು. ಉದಾಹರಣೆಗೆ, ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ಮೋಸದ ಸಂವಹನ, ಪಾವತಿ ವಾಲೆಟ್‌ಗಳಿಗೆ ಸಂಬಂಧಿತ ಲಿಂಕ್‌ಗಳು, ಬ್ಯಾಂಕ್ ಅಧಿಕಾರಿಯ ಸೋಗಿನಲ್ಲಿ ಅಥವಾ ಸಂಬಂಧಿಕರ ಸೋಗಿನಲ್ಲಿ ಕರೆಮಾಡುವವರ ವಿರುದ್ಧ ದೂರಬಹುದು.

ಎಲ್ಲ ರೀತಿಯ ವ್ಯವಹಾರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಜನರು ತಮ್ಮ ಫೋನ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ಈ ವ್ಯವಹಾರದ ಮಾಹಿತಿ ಕದಿಯಲು ಸೈಬರ್ ಖದೀಮರು ಸಕ್ರಿಯರಾಗಿರುತ್ತಾರೆ. ಅದಕ್ಕಾಗಿ ಅವರು ನಾನಾ ವೇಷದಲ್ಲಿ ಬಳಕೆದಾರರನ್ನು ಸಂಪರ್ಕಿಸಲು ಯತ್ನಿಸುತ್ತಾರೆ. ಈ ಬಗ್ಗೆ ಅನುಮಾನ ಬಂದ ಕೂಡಲೇ ಮೊಬೈಲ್ ಬಳಕೆದಾರರು ಕೂಡಲೇ 'ಚಕ್ಷು'ಗೆ ವರದಿ ಮಾಡಬಹುದು. ಆ ದೂರುಗಳನ್ನು ಆಧರಿಸಿ 'ಚಕ್ಷು' ಕ್ರಮಕೈಗೊಳ್ಳಲಿದೆ.

ಕೇಂದ್ರ ಐಟಿ ಮತ್ತು ಸಂವಹನ ಸಚಿವ ಪಿಯೂಷ್ ಗೋಯಲ್ ಪ್ರಕಾರ 'ಚಕ್ಷು' ಸೈಟ್ ಬಳಕೆಯಿಂದ ಆನ್‌ಲೈನ್ ವಂಚನೆಯನ್ನು ಎದುರಿಸಲು ಸರ್ಕಾರಕ್ಕೆ ಸಹಾಯವಾಗಲಿದೆ. ಕಳೆದ ಒಂಬತ್ತು ತಿಂಗಳ ಅವಧಿಯಲ್ಲಿ ಸರ್ಕಾರವು ಅಕ್ರಮ ವಹಿವಾಟಿಗೆ ಸಂಬಂಧಿಸಿದ 1,008 ಕೋಟಿ ರೂಪಾಯಿಯನ್ನು ಫ್ರೀಜ್ ಮಾಡಿದೆ. ಸೈಬರ್ ಖದೀಮರ ಪಾಲಾಗುತ್ತಿದ್ದ ನಾಗರಿಕರಿಗೆ ಸಂಬಂಧಿಸಿದ ಸುಮಾರು 1,000 ಕೋಟಿ ರೂಪಾಯಿಯನ್ನು ತಪ್ಪಿಸಿದೆ ಎಂದಿದ್ದಾರೆ ಅವರು.



ಪೋರ್ಟಲ್‌ನಲ್ಲಿ ವರದಿಯಾದ ಪ್ರತಿ ಪ್ರಕರಣವನ್ನೂ ಕೂಲಂಕಷ ತನಿಖೆಗೆ ಒಳಪಡಿಸಲಾಗುವುದು. ಅದಕ್ಕೆ ಅನುಗುಣವಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ದೂರಸಂಪರ್ಕ ಸಚಿವಾಲಯವು ಭಾರತೀಯ ರಿಸರ್ವ್ ಬ್ಯಾಂಕ್ ಸೇರಿದಂತೆ ಹಣಕಾಸು ಸಂಸ್ಥೆಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದು, ಸೈಬರ್ ಕಳ್ಳರ ಪಾಲಾದ ಹಣವನ್ನು ಮರುಪಡೆಯಲು ಮತ್ತು ಮೋಸದ ವಹಿವಾಟುಗಳಿಂದ ಕೂಡಿದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಕಾರ್ಯನಿರ್ವಹಿಸುತ್ತಿದೆ. ಮೋಸದ ಚಟುವಟಿಕೆಗಳಿಗೆ ಬಳಸಲಾದ 17 ಲಕ್ಷ ಮೊಬೈಲ್ ಸಂಖ್ಯೆಗಳನ್ನು ಕಳೆದ ಒಂಬತ್ತು ತಿಂಗಳುಗಳಲ್ಲಿ ನಿರ್ಬಂಧಿಸಲಾಗಿದೆ.

### ಬಳಕೆ ಹೇಗೆ?

- sancharsaathi.gov.inಗೆ ಭೇಟಿ ಕೊಟ್ಟು 'ಸಂಚಾರ ಸಾಥಿ' ಪೋರ್ಟಲ್‌ಗೆ ಲಾಗ್ ಇನ್ ಆಗಿ.
- 'ನಾಗರಿಕ ಕೇಂದ್ರಿತ ಸೇವೆಗಳು' ಆಯ್ಕೆಯಡಿ ಇರುವ 'ಚಕ್ಷು' ಆಯ್ಕೆ ಆಯ್ದುಕೊಳ್ಳಿ.
- ಹಕ್ಕು ನಿರಾಕರಣೆ ಮತ್ತು 'ಚಕ್ಷು' ಬಳಕೆಗಳನ್ನು ಪರಿಶೀಲಿಸಿ, ನಂತರ 'ವರದಿ ಮಾಡುವುದಕ್ಕಾಗಿ ಮುಂದುವರಿಸಿ' ಕ್ಲಿಕ್ ಮಾಡಿ.
- ಶಂಕಿತ ವಂಚನೆಯ ಸಂವಹನದ ಮಾಧ್ಯಮ, ವರ್ಗ ಮತ್ತು ಸಮಯದಂತಹ ವಿವರಗಳೊಂದಿಗೆ ಫಾರ್ಮ್ ಭರ್ತಿ ಮಾಡಿ.
- ವೈಯಕ್ತಿಕ ವಿವರಗಳನ್ನು ಸೇರಿಸಿ, ಒಟಿಪಿಯೊಂದಿಗೆ ಪರಿಶೀಲಿಸಿ ಮತ್ತು ದೂರನ್ನು ಸಲ್ಲಿಸಿ.

### 'ಚಕ್ಷು' ಹೆಸರು ಏಕೆ?

'ಚಕ್ಷು' ಎಂಬುದು ಸಂಸ್ಕೃತ ಪದ. ಈ ಪದದ ಕನ್ನಡ ಅರ್ಥ 'ಕಣ್ಣು'. ಹೀಗಾಗಿ ಈ ಹೆಸರನ್ನೇ ಪೋರ್ಟಲ್‌ಗೆ ಇಡಲಾಗಿದೆ. ಈ ಸೈಟ್ ಬಳಕೆದಾರರಿಗೆ ಹದ್ದಿನ ಕಣ್ಣಿನಂತೆಯೇ ಕಾರ್ಯನಿರ್ವಹಿಸಲಿದೆ. ಎಲ್ಲ ರೀತಿಯ ಡಿಜಿಟಲ್ ಕೃತ್ಯಗಳಿಂದ ನಮ್ಮನ್ನು ರಕ್ಷಿಸಲು ನೆರವಾಗುತ್ತದೆ. ದೂರಸಂಪರ್ಕ ಇಲಾಖೆಯೊಂದಿಗೆ ಕಾರ್ಯನಿರ್ವಹಿಸುವ ಈ ಪೋರ್ಟಲ್, ಟೆಲಿಕಾಂ ಕ್ಷೇತ್ರದ ಅನುಮಾನಾಸ್ಪದ ಚಟುವಟಿಕೆಯ ಮೇಲೆ ಕಣ್ಣಿಡುತ್ತದೆ.

### ಏನೆಲ್ಲಾ ವರದಿ ಮಾಡಬಹುದು?

- ಜನರು ತಮ್ಮ ಹೆಸರಿನಲ್ಲಿರುವ ಮೊಬೈಲ್ ಸಂಪರ್ಕಗಳನ್ನು ಪರಿಶೀಲಿಸಿ ಮತ್ತು ಅನಗತ್ಯ ಅಥವಾ ಅನಧಿಕೃತ ಸಂಪರ್ಕಗಳನ್ನು ವರದಿ ಮಾಡಿ ಅವುಗಳನ್ನು ಬ್ಲಾಕ್ ಮಾಡಿಸಬಹುದು.
- ಕಳೆದುಕೊಂಡ ಮೊಬೈಲ್‌ಗಳನ್ನು ಪತ್ತೆಹಚ್ಚಲು, ಅವುಗಳನ್ನು ನಿರ್ಬಂಧಿಸಲು ಕೋರಬಹುದು.
- ಹೊಸ ಅಥವಾ ಬಳಸಿದ ಸಾಧನಗಳನ್ನು ಖರೀದಿಸುವಾಗ ಮೊಬೈಲ್ ಹ್ಯಾಂಡ್‌ಸೆಟ್‌ಗಳ ದೃಢೀಕರಣವನ್ನು ಪರಿಶೀಲಿಸಬಹುದು.
- ಭಾರತೀಯ ದೂರವಾಣಿ ಸಂಖ್ಯೆಗಳನ್ನು ಕಾಲರ್ ಐಡಿಯಾಗಿ ಪ್ರದರ್ಶಿಸುವ ಅಂತರರಾಷ್ಟ್ರೀಯ ಕರೆಗಳನ್ನು ವರದಿ ಮಾಡಬಹುದು. ■